



## ಶಾಸ್ತ್ರೀಯ ಸಂಗೀತಕ್ಕೆ ಒತ್ತು

ಚಂದನ ವಾಹಿನಿ ಹೊರತುಪಡಿಸಿದರೆ ಇನ್ನಾವ ವಾಹಿನಿಗಳೂ ಶಾಸ್ತ್ರೀಯ ಸಂಗೀತಕ್ಕೆ ಆದ್ಯತೆಯನ್ನೇ ನೀಡಿಲ್ಲ. ಇದು ವಿಪರ್ಯಾಸ! ಸರಿಗಮಪ ಲಿಟಲ್ ಚಾಂಪ್‌ನಲ್ಲಿ 'ಝೀ' ಕನ್ನಡವಾಹಿನಿ ಸೇರಿದಂತೆ ಎಲ್ಲಾ ವಾಹಿನಿಗಳೂ ಪುಟಾಣಿಗಳಿಗೆ ಸಿನಿಮಾ ಹಾಡುಗಳಿಗೆ ಮಾತ್ರ ಪ್ರಾಧಾನ್ಯತೆ ನೀಡಿವೆ. ಚಿತ್ರಸಂಗೀತವು ಶಾಸ್ತ್ರೀಯ ಸಂಗೀತದ ಒಂದು ಭಾಗವೇ ಆದರೂ ಬರೀ ಸಿನಿಮಾ ಹಾಡುಗಳಿಂದಲೇ ಸ್ಪರ್ಧಿಗಳ ಸಿನಿಮಾ ಜ್ಞಾನವನ್ನು ಅಳೆಯುತ್ತಿದೆ. ಈಗಲಾದರೂ 'ಝೀ' ವಾಹಿನಿ ಲಿಟಲ್ ಚಾಂಪ್‌ನಲ್ಲೂ ಶಾಸ್ತ್ರೀಯ ಸಂಗೀತಕ್ಕೆ ಪ್ರೋತ್ಸಾಹ ನೀಡಲಿ.

—ಬಿ.ಎಸ್. ರಮೇಶ್, ಬೆಂಗಳೂರು

## ಮುಗ್ಧಪಾಂಡು

'ಝೀ' ಕನ್ನಡ ಚಾನೆಲ್‌ನಲ್ಲಿ ಮೂಡಿಬರುವ 'ನಿಗೂಢ ರಾತ್ರಿಗಳು' ಧಾರಾವಾಹಿಯಲ್ಲಿ ಪಾಂಡುವಿನ ಪಾತ್ರ ತುಂಬಾ ಗಮನ ಸೆಳೆಯುತ್ತಿದೆ. ಪಾಂಡುವಿನ ಮರೆಗುಳಿತನ ಕೆಲವೊಮ್ಮೆ ಅತೀ ಅನಿಸಿದರೂ, ಅವನ ಮುಗ್ಧತೆಯನ್ನು ತೋರಿಸುವಲ್ಲಿ ಯಶಸ್ವಿಯಾಗಿದೆ. ಈ ಪಾತ್ರ ನವಿರಾದ ಹಾಸ್ಯದ ಮೂಲಕ ರಂಜಿಸುತ್ತಿದೆ.

—ಜೆ. ಪ್ರದೀಪ್ ಕುಮಾರ್, ಹೂವಿನಹಡಗಲಿ

## ಸಂಗಾತಿ ಸಂಪ್ರೀತಿ

ಚಂದನ ವಾಹಿನಿಯ ಸುಂದರ–ಸುಮಧುರ ಕಾರ್ಯಕ್ರಮ 'ಸಂಗೀತ ಸಂಪ್ರೀತಿ'. ದಾಂಪತ್ಯದ ಪ್ರೀತಿ ನೀತಿಯನ್ನು ತಿಳಿಸಿಕೊಡುವ ಈ ಕಾರ್ಯಕ್ರಮ ಶ್ಲಾಘನೀಯ. ಇಂದಿನ ಯುವಜನಾಂಗದ ದಾಂಪತ್ಯದ ಕನಸಿನ ಭವನ ಕುಸಿಯುತ್ತಿರುವ ದಿನಗಳಲ್ಲಿ ಗಟ್ಟಿಯಾದ ಸಂಸಾರದ ಸಾರ, ಸತಿ–ಪತಿಗಳಲ್ಲಿ ಇರಬೇಕಾದ ಪ್ರೀತಿ–ವಿಶ್ವಾಸ ಮತ್ತು ನಂಬಿಕೆಯ ಭವನ (ಕನಸಿನ) ಕಟ್ಟುವ ಬುನಾದಿಯ ಬಗೆಯನ್ನು ಕಾರ್ಯಕ್ರಮಕ್ಕೆ ಬಂದ ದಂಪತಿಗಳು ಮಾರ್ಮಿಕವಾಗಿ ಮನಮುಟ್ಟುವಂತೆ ಹೇಳುವಾಗ ಸಂತೋಷವೆನಿಸುತ್ತದೆ. ನಿರೂಪಕರಾಗಿ ಶಶಿಧರ ಕೋಟೆ, ಸೀತಾ ಕೋಟೆ ಮತ್ತು ಹಿರೇಮಠ ದಂಪತಿಗಳು ಕಾರ್ಯಕ್ರಮವನ್ನು ತುಂಬಾ ಚೆನ್ನಾಗಿ ನಡೆಸಿಕೊಡುತ್ತಾರೆ.

ಇಂದಿನ ಯಾಂತ್ರಿಕ ಜೀವನದಲ್ಲಿ ಇಂಥ ಒಳ್ಳೊಳ್ಳೆಯ ಕಾರ್ಯಕ್ರಮವನ್ನು ಹಿರಿಯ–ಕಿರಿಯ ದಂಪತಿಗಳು ನೋಡಿ ಆನಂದಿಸಬೇಕು.

—ಮೇಘನಾ ಜಯತೀರ್ಥ ಜಹಗೀರದಾರ, ಧಾರವಾಡ

ವಾರದ ಪತ್ರ

## ಏಕೆ ಹೀಗೆ?

ಪುನೀತ್ ರಾಜ್‌ಕುಮಾರ್ ನಡೆಸಿಕೊಡುವ 'ಫ್ಯಾಮಿಲಿ ಪವರ್'ನಲ್ಲಿ ಒಂದು ಪ್ರಮಾದ ಕಂಡುಬರುತ್ತದೆ. 'ಸ್ಪರ್ಧಿಗಳು ಊರು ಮತ್ತು ಸಿನಿಮಾದ ಹೆಸರನ್ನು ಸರಿಯಾಗಿ ಹೇಳಬೇಕು. ಆದರೆ ಗಾದೆ ಮಾತನ್ನು ಮಾತ್ರ ಅದರ ಅರ್ಥಬರುವಂತೆ ಹೇಳಿದರೆ ಸಾಕು ಹಣ ಕೊಡುತ್ತೇವೆ' ಎಂದು ಪ್ರತಿ ಶೋನಲ್ಲೂ ಪದೇ ಪದೇ ಹೇಳುತ್ತಿರುತ್ತಾರೆ.

ಕಳೆದ ವಾರ ಒಂದು ಫ್ಯಾಮಿಲಿಗೆ 'ಹಲಸಿನ ಹಣ್ಣು ಬೇಕು. ಅದರ ಮೇಣ ಬೇಡ ಅಂದ ಹಾಗೆ' ಎಂಬ ಒಂದು ಗಾದೆ ಬಂದಿತ್ತು. ಅದಕ್ಕೆ ಅವರು 'ಹಲಸಿನ ಹಣ್ಣು ಇಷ್ಟ, ಅದರ ಮೇಣ ಬೇಡ ಅಂದ' ಎಂದು ಹೇಳಿದರೂ ಹಣವನ್ನು ಕೊಡಲಿಲ್ಲ. ಎರಡರ ಅರ್ಥವೂ ಒಂದೇ ಎಂಬುದು ಪ್ರಾಯೋಜಕರಿಗೆ ಗೊತ್ತಾಗಲಿಲ್ಲವೋ ಅಥವಾ ಒಂದು ಲಕ್ಷ ರೂ ಉಳಿಸುವ ಹುನ್ನಾರವೋ! ಪಾಪ ಅವರು 2 ಲಕ್ಷ ರೂ.ಗೆ ತೃಪ್ತಿಪಟ್ಟುಕೊಂಡು ಹೋದರು. 'ಎರಡು ದೋಣಿಗಳ ಮೇಲೆ ಕಾಲು ಇಟ್ಟ ಹಾಗೆ' ಎಂಬ ಗಾದೆಗೆ 'ಎರಡು ದೋಣಿಗಳ ಮೇಲೆ ಕಾಲಿಡಬಾರದು' ಎಂದು ಹೇಳಿದವರಿಗೂ ಹಣ ಸಿಗಲಿಲ್ಲ.

—ಪುಷ್ಪಾ ಎನ್.ಕೆ. ರಾವ್, ಉಡುಪಿ

## ಕುತೂಹಲದತ್ತ 'ಗಂಗಾ'

'ಝೀ' ಕನ್ನಡದಲ್ಲಿ 'ಗಂಗಾ' ಧಾರಾವಾಹಿ ಕುತೂಹಲದತ್ತ ಮುನ್ನಡೆದಿದೆ. ಮನೆ ಮಂದಿಯೆಲ್ಲ ನೋಡುವ ಉತ್ತಮ ಧಾರಾವಾಹಿ. ಅಜ್ಜಮ್ಮನ ನೈಜ ಅಭಿನಯ, ಗಂಭೀರತೆ, ಮನಮುಟ್ಟುವ ಮಾತು, ಅಪ್ಪಟವಾದ ಧಾರವಾಡದ ಭಾಷೆ, ಸಕ್ಕೂಬಾಯಿಯ ಮುಖದ ಹಾವಭಾವದಲ್ಲೆ ಏನೆಂದು ಅರ್ಥಮಾಡಿಕೊಳ್ಳಬಹುದು. ಧಾರಾವಾಹಿಯ ಮಧ್ಯದಲ್ಲಿ ಮುಂದಿನಭಾಗದಲ್ಲಿ ಎಂದು ಅದೇ ದೃಶ್ಯವನ್ನು 2–3 ಸಲ ಪುನಃ ತೋರಿಸುವುದರಿಂದ ವೀಕ್ಷಕರಿಗೆ ಬೇಜಾರೆನಿಸುತ್ತದೆ. ನಿರ್ದೇಶಕರು ಸರಿಪಡಿಸಲಿ.

—ವಿ.ಎಸ್. ಹಿಂದೂಪುರ, ಬಳ್ಳಾರಿ

## ಮನ ಸೆಳೆದ ನೇಹಾ

'ಝೀ' ಕನ್ನಡದ 'ಸರಿಗಮಪ ಲಿಟಲ್ ಚಾಂಪ್' ಕಾರ್ಯಕ್ರಮ ಸೊಗಸಾಗಿದೆ. ಎಲ್ಲಾ ಮಕ್ಕಳು ಚೆನ್ನಾಗಿ ಹಾಡುತ್ತಾರೆ. ಅದರಲ್ಲೂ ಪುಟ್ಟ ನೇಹಾಳ ಹಾಡುಗಾರಿಕೆ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸುತ್ತದೆ.

—ಎಸ್. ವಿಜಯಕುಮಾರಿ, ಬೆಂಗಳೂರು

## ಕನ್ನಡಿಗರ ಹೆಮ್ಮೆ

ಬರ್ಕಲೀ ಸ್ಕೂಲ್ ಆಫ್ ಮ್ಯೂಸಿಕ್, ಬಾಸ್ಟನ್ ಅಂತರರಾಷ್ಟ್ರೀಯ ಸಂಗೀತ ಶಾಲೆ ಪ್ರಪಂಚದ ವಿವಿಧ ದೇಶಗಳಿಂದ ಸಂಗೀತ ಕಲಿಯಲು ಜನರು ಬರುವ ತಾಣ. ಇಂತಹ ಶಾಲೆಯಲ್ಲಿ ಕಾರ್ಯಾಗಾರವನ್ನು ನಡೆಸಿಕೊಡಲು ಗಾಯಕ ವಿಜಯಪ್ರಕಾಶ್ ಅವರಿಗೆ ಅವಕಾಶ ಸಿಕ್ಕಿದ್ದು, 42 ದೇಶಗಳ ಪ್ರತಿನಿಧಿಗಳಿಗೆ ಸಂಗೀತವನ್ನು ಕಲಿಸಿದ್ದು ಅದರ ಕ್ಲಿಪಿಂಗನ್ನು ವೀಕ್ಷಕರ ಗಮನಕ್ಕೆ ಝೀ ಟಿವಿ ತಂದದ್ದು ತುಂಬಾ ಸಂತೋಷದ ವಿಚಾರ. ಇದು ಕನ್ನಡಿಗರ ಹೆಮ್ಮೆ

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ನೈಜತೆ ಬೇಡವೇ?

ಹೆಂಡತಿ ಸತ್ತುಹೋಗಿದ್ದಾಳೆಂದು ನಾಯಕ ಮರುಮದುವೆಯಾಗುತ್ತಾನೆ. ಆದರೀಗ ಸತ್ತವಳು ಮರಳಿ ಬಂದಿದ್ದಾಳೆ. ಅವಳ ನೆನಪಿನ ಶಕ್ತಿ ಹೊರಟು ಹೋಗಿದೆ. ನಾಯಕನಿಗೆ ಇಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸಂದಿಗ್ಧತೆ. ಅತ್ತೆಗೆ ಹಿರಿಯ ಸೊಸೆಯ ಮೇಲೆ ಮಮಕಾರ. ಇದು ಕಿನ್ನರಿ ಧಾರಾವಾಹಿಯ ಕಥೆ. ಎರಡನೆಯವಳ ಸ್ಥಿತಿ ಏನು? ಬೇಕಾದಾಗ ಮದುವೆಯಾಗಿ ಬೇಡವಾದಾಗ ಬಿಟ್ಟುಬಿಡಲು ಇದೇನು ಆಟವೆ? ಧಾರಾವಾಹಿಯಾದರೂ ನೈಜತೆ ಬೇಡವೆ?

—ಪ್ರಭಾವತಿ ಕೆ.ಪಿ., ಬೆಂಗಳೂರು

## ತಪ್ಪು ಮಾಹಿತಿ

ಕಲರ್ ಸೂಪರ್‌ನಲ್ಲಿ ರಾತ್ರಿ ಮಜಾ ಟಾಕೀಸ್‌ನ ಜಾಹೀರಾತು ಬರುತ್ತದೆ. ಅದರಲ್ಲಿ ಗುರುವಾರ ಹಾಗೂ ಶನಿವಾರ ರಾತ್ರಿ 8 ಗಂಟೆಗೆ ಮಜಾ ಟಾಕೀಸ್ ಪ್ರಸಾರವಾಗುತ್ತದೆ ಎಂದು ಹೇಳಲಾಗುತ್ತದೆ. ಆದರೆ ಜಾಹೀರಾತಿನಲ್ಲಿ ಗುರುವಾರ ಹಾಗೂ ಶುಕ್ರವಾರ ರಾತ್ರಿ 8 ಗಂಟೆಗೆ ಪ್ರಸಾರ ಎಂದು ಸರಿಯಾಗಿ ಬರೆದಿರುತ್ತದೆ. ಈ ವ್ಯತ್ಯಾಸ 2–3 ವಾರದಿಂದ ನಾನು ಗಮನಿಸುತ್ತಿದ್ದೇನೆ. ಸಂಬಂಧಪಟ್ಟವರು ಈ ಎದ್ದು ಕಾಣುವ ತಪ್ಪನ್ನು ಸರಿ ಪಡಿಸಬಾರದೇ?

— ವಸಂತಿ ಪಾರಂಪಳ್ಳಿ, ಬೆಂಗಳೂರು